## ‘ನಂಜುಂಡರೇಖೆ’ಯಲ್ಲಿ ಸಾಹಿತಿಗಳ ಸಮಾಗಮ!

# ಕ್ಯಾರಿಕೇಚರ್ ಕಲಾವಿದನ ವಿನೂತನ ಚಿತ್ರಾಯಣ

ವ್ಯಂಗ್ಯಚಿತ್ರ ಕಲಾವಿದನಾಗಿ ಕಾರ್ಟೂನ್ ಪ್ರಿಯರ ಕಣ್ಣಲ್ಲಿ ಮಿಂಚು ಹರಿಸಿರುವ ಚಿತ್ರಕಾರ ನಂಜುಂಡ ಸ್ವಾಮಿ ಈ ಹಿಂದೆ 75ಕ್ಕೂ ಹೆಚ್ಚು ಸಂಗೀತ ಪಟುಗಳ ವ್ಯಂಗ್ಯರೇಖಾ ಭಾವಚಿತ್ರಗಳನ್ನು ರಚಿಸಿ, ಗಮನ ಸೆಳೆದದ್ದು ನೆನಪಿದೆಯಲ್ಲವೆ? ಅವರೀಗ ಕನ್ನಡ ರಾಜ್ಯೋತ್ಸವ ಸಂದರ್ಭಕ್ಕೆಂದೇ ಕನ್ನಡದ ಮೂರು ತಲೆಮಾರುಗಳ ಖ್ಯಾತ-ವಿಖ್ಯಾತ ಸಾಹಿತಿಗಳನ್ನು ತಮ್ಮ ರೇಖೆಗಳಲ್ಲಿ ಸೆರೆಹಿಡಿದಿದ್ದಾರೆ!’ ಈ ಕ್ಯಾರಿಕೇಚರ್‌ಗಳನ್ನು ಮಾತಿನ ಮೂಲಕ ವಿವರಿಸುವುದು ಒಂದು ಸವಾಲೇ ಸರಿ. ಏನಿದ್ದರೂ ಇಲ್ಲಿ ಕಣ್ಣು ಹಾಗೂ ಹೃದಯಕ್ಕಷ್ಟೇ ಕೆಲಸ! ಇಂಥದೊಂದು ಅನನ್ಯವೆನಿಸುವ ಪ್ರಯತ್ನದ ಮೂಲಕ ಈ ಕಲಾವಿದ ಹಳೆ-ಹೊಸ ತಲೆಮಾರಿನ ಸಾಹಿತ್ಯ ಪ್ರಿಯರಲ್ಲಿ ನಾಡು-ನುಡಿಯ ಗೌರವ ವೃದ್ಧಿಸಿಕೊಳ್ಳಲು ನೆರವಾಗುತ್ತಿದ್ದಾರೆ!



*ಕಲಾವಿದ ನಂಜುಂಡ ಸ್ವಾಮಿ*

❑ಸವಿತಾ ಹೊಳ್ಳ



*ಮಾಸ್ತಿ ವೆಂಕಟೇಶ ಅಯ್ಯಂಗಾರ್*



*ತ್ರಿವೇಣಿ*

**ಕ**ನ್ನಡದ ಆಸ್ತಿ ಮಾಸ್ತಿ ನಮ್ಮೆಲ್ಲರಿಗೂ ಆಶೀರ್ವಾದದ ನಗು ಹರಿಸುತ್ತಿದ್ದಾರೆ. ಶಿವರಾಮ ಕಾರಂತರು ಹೊತ್ತಗೆ ಹಿಡಿದು ಓದಲು ಕುಳಿತಿದ್ದಾರೆ. ಕಾದಂಬರಿಕಾರ್ತಿ ತ್ರಿವೇಣಿ ಹೊಸ ಬಗೆಯ ಕಥಾ ವಸ್ತುವಿನ ಹುಡುಕಾಟದಲ್ಲಿದ್ದಾರೆ. ಜಿ. ವೆಂಕಟಸುಬ್ಬಯ್ಯನವರು ಪುಸ್ತಕ ತೆರೆದು ಪದಗಳ ಅರ್ಥದ ಪಥ ತೋರಿಸುತ್ತಿದ್ದಾರೆ. ಚಂದ್ರಶೇಖರ ಕಂಬಾರರು ಹೊಸಕವಿಗಳಿಗೆ ಕಾವ್ಯಪಾಠ ಬೋಧಿಸುತ್ತಿದ್ದಾರೆ.

ಟಿ. ಸುನಂದಮ್ಮ, ಎಂ.ಕೆ. ಇಂದಿರಾ, ಚೆನ್ನವೀರ ಕಣವಿ, ಗೋವಿಂದ ಪೈ, ಕೈಲಾಸಂ, ಕೆ.ಎಸ್. ನರಸಿಂಹಸ್ವಾಮಿ, ಜಿ.ಪಿ. ರಾಜರತ್ನಂ, ತರಾಸು ಮತ್ತಿತರ ಮೇರು ಸಾಹಿತಿಗಳು ಮತ್ತಷ್ಟು ಹೊಸ ವಿಷಯಗಳ ಚರ್ಚೆಗೆ ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ.

ಕನ್ನಡದ ಮೇರು ಸಾಹಿತಿಗಳೆಲ್ಲಾ ಹೀಗೆ ಒಂದಾಗಿರುವುದು ಬೆಂಗಳೂರಿನ ಬಸವನಗುಡಿಯ ‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್’ನಲ್ಲಿ. ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಕಲಾವಿದ ನಂಜುಂಡಸ್ವಾಮಿ ಅವರ ಕುಂಚದಲ್ಲಿ ಅರಳಿದ ವ್ಯಂಗ್ಯ ಭಾವಚಿತ್ರಗಳಲ್ಲಿ. ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಲ್ಲಿ ನಡೆಯುತ್ತಿರುವ ಕ್ಯಾರಿಕೇಚರ್ (ವ್ಯಂಗ್ಯರೇಖಾ-ಭಾವಚಿತ್ರ) ಪ್ರದರ್ಶನದಲ್ಲಿ ಹಳೆ-ಹೊಸ ಸಾಹಿತಿಗಳೆಲ್ಲಾ ಒಂದಾಗಿ ವೀಕ್ಷಕರನ್ನು ಬೇರೆಯದೇ ಲೋಕಕ್ಕೆ ಕರೆದೊಯ್ದಿದ್ದಾರೆ.

ಅಂಕುಡೊಂಕಿನ ಭಾವರೇಖೆಗಳ ಮೂಲಕ ಸಾಹಿತಿಗಳ ವಿವಿಧ ಲಹರಿಗಳನ್ನು ಚಿತ್ರಿಸುವ ವಿನೂತನ ಪ್ರಯತ್ನಕ್ಕೆ ಅವರು ವಿಭಿನ್ನ ಪ್ರಕಾರದಲ್ಲಿ ಭಾಷ್ಯ ಬರೆದಿದ್ದಾರೆ. ಈ ಕಲ್ಪನೆಯೇ ಕನ್ನಡ ಸಾಹಿತ್ಯದ ಮಟ್ಟಿಗೆ ಹೊಸತು ಎನ್ನಬಹುದು.



ಕೈಲಾಸಂ



ಚೆನ್ನವೀರ ಕಣವಿ



ಶಿವರಾಮ ಕಾರಂತ



ಗೋವಿಂದ ಪೈ



ಚಂದ್ರಶೇಖರ ಕಂಬಾರ



ಎಂ.ಕೆ. ಇಂದಿರಾ

ಕುಂಚದ ಕೈಚಳಕದ ಹಿಂದಿರುವ ಕಥನವೂ ಅಷ್ಟೇ ರೋಚಕವಾಗಿದೆ.

ಪ್ರಸಿದ್ಧ ನಟರ, ಖ್ಯಾತ ಕ್ರಿಕೆಟಿಗರ ಚಿತ್ರಗಳನ್ನು ಎಲ್ಲರೂ ಬಿಡಿಸುತ್ತಾರೆ. ಆದರೆ ಸಾಹಿತಿಗಳ, ಆದರಲ್ಲೂ ನಮ್ಮದೇ ನಾಡಿನಲ್ಲಿ ಹುಟ್ಟಿ ಬೆಳೆದು ಕನ್ನಡದ ಖ್ಯಾತಿಯನ್ನು ಮುಗಿಲೆತ್ತರಕ್ಕೇರಿಸಿದ ಸಾಹಿತಿಗಳೆಂದರೆ, ಹೊಸ ತಲೆಮಾರಿನ ಬಹುತೇಕ ಎಲ್ಲರಿಗೂ
ನಿರ್ಲಕ್ಷ್ಯ. ಇದೇ ಕಾರಣಕ್ಕೆ ಸಾಹಿತಿಗಳನ್ನು ಲಾಲಿತ್ಯಪೂರ್ಣ ರೇಖೆಗಳಲ್ಲಿ ಪಡಿಮೂಡಿಸಿದ್ದಾರೆ ನಂಜುಂಡಸ್ವಾಮಿ. ಇಲ್ಲಿ ಹಿರಿಯ–ಸಮಕಾಲೀನ ಸಾಹಿತಿಗಳಿಂದ ಹಿಡಿದು ಇಹಲೋಕದಿಂದ ಮರೆಯಾದ, ಆದರೆ ಕೃತಿಗಳ ಮೂಲಕ ಇಂದಿಗೂ ಜೀವಂತವಿರುವ ಹಲವು ಮಂದಿ ಸಾಹಿತಿಗಳು ವಿಭಿನ್ನ ರೂಪಗಳಲ್ಲಿ ಮೂಡಿಬಂದಿದ್ದಾರೆ. ಹಳೆಕಾಲದ ಮಾತ್ರವಲ್ಲ, ಆಧುನಿಕ ಕವಿ–ಕಥೆಗಾರರಿಗೂ ಜಾಗ ನೀಡುವ ಮೂಲಕ ನಂಜುಂಡ ಸ್ವಾಮಿ ಮೂರು ತಲೆಮಾರುಗಳ ಸಾಹಿತಿಗಳನ್ನೂ ತಮ್ಮ ಕುಂಚದಲ್ಲಿ ಸೆರೆಹಿಡಿದಿದ್ದಾರೆ.

‘ನವೆಂಬರ್ ತಿಂಗಳಲ್ಲಿ ಈ ಪ್ರದರ್ಶನವನ್ನು ಆಯೋಜಿಸಿರುವುದು ಸಕಾರಣಕ್ಕಾಗಿಯೇ. ಈ ಪ್ರದರ್ಶನವನ್ನು ವೀಕ್ಷಿಸಲು ಆಗಮಿಸುವವರು ಸಾಹಿತಿಗಳನ್ನು ನೆನಪಿಸಿಕೊಳ್ಳುತ್ತಾರೆ, ಅವರ ಬಗ್ಗೆ ಮಾತನಾಡುತ್ತಾರೆ, ಮಾತ್ರವಲ್ಲ, ಅವರ ಕೃತಿಗಳನ್ನು ನೆನಪಿಸಿಕೊಂಡು ಓದುತ್ತಾರೆ. ಅಲ್ಲಿಗೆ ನಮ್ಮ ಉದ್ದೇಶ ಸಫಲವಾದಂತೆ’ ಎನ್ನುತ್ತಾರೆ ನಂಜುಂಡಸ್ವಾಮಿ.

ಆರಂಭದಲ್ಲಿ ಚಿತ್ರಕಲಾವಿದರಾಗಿ ಗುರುತಿಸಿಕೊಂಡಿದ್ದ ಅವರು ಕಾರ್ಟೂನ್ ಕ್ಷೇತ್ರಕ್ಕೆ ಕಾಲಿಟ್ಟದ್ದು ಕಳೆದ ಏಳು ವರ್ಷಗಳ ಹಿಂದೆ. ಶಿವಮೊಗ್ಗ ಮೂಲದ ಅವರ ತಂದೆ ವೈ.ಕೆ. ಶ್ರೀಕಂಠಯ್ಯ ಸಂಗೀತಗುರುಗಳು ಹಾಗೂ ಕಲಾವಿದರು. ಬಾಲ್ಯದಲ್ಲಿ ಕೇಳುತ್ತಿದ್ದ ಭಾವಗೀತೆಗಳು ನಂಜುಂಡ ಸ್ವಾಮಿ ಅವರ ಮನಸ್ಸಿನ ಮೇಲೂ ಪ್ರಭಾವ ಬೀರುತ್ತಿದ್ದವು. ಮನೆಗೆ ಆಗಾಗ ಹಿರಿಯ ಸಾಹಿತಿಗಳೂ ಭೇಟಿ ನೀಡುತ್ತಿದ್ದರು. ‘ಶಿವರಾಮ ಕಾರಂತ, ಜಿ.ಎಸ್. ಶಿವರುದ್ರಪ್ಪ ಅವರ ಮುಖ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ’ ಎನ್ನುತ್ತಾರೆ ನಂಜುಂಡಸ್ವಾಮಿ.

ಸಹಜವಾಗಿಯೇ ಸಾಹಿತ್ಯ ಹಾಗೂ ಸಂಗೀತಕ್ಕೆ ಒಗ್ಗಿಕೊಂಡು ಅವರು ಬೆಳೆದರು. ಅವರ ಕಲಾಭ್ಯಾಸಕ್ಕೆ ತಂದೆಯೇ ಮೊದಲ ಗುರುವಾದರು. ಬಳಿಕ ಶಿಲ್ಪಿ ಕೆ. ಜ್ಞಾನೇಶ್ವರ್ ಅವರಿಂದ ಲಲಿತಕಲೆಯ ಮಾಧ್ಯಮವನ್ನು ಕ್ರಮಬದ್ಧವಾಗಿ ಕಲಿತರು. ಅಣ್ಣ ಚಂದ್ರಶೇಖರ್ ಹಾಗೂ ತಂಗಿ ನಂದಿನಿ ಕೂಡ ಚಿತ್ರ–ಸಂಗೀತ ಕಲೆಗಳ ಪರಿಣತರೇ ಆದ್ದರಿಂದ ಅವರಿಗೆ ಇದೇ ಪರಿಸರದಲ್ಲಿ ಬೆಳೆಯಲು ಅನುಕೂಲವಾಯಿತು.


ಐವತ್ತನೆಯ ವಯಸ್ಸಿನಲ್ಲಿ ಬೆಂಗಳೂರಿಗೆ ತೆರಳಿ ಪ್ರತಿಕಾರಂಗದಲ್ಲಿ ವೃತ್ತಿ ಆರಂಭಿಸುವಾಗ



*ಟಿ. ಸುನಂದಮ್ಮ*



*ತರಾಸು*



*ಜಿ. ವೆಂಕಟಸುಬ್ಬಯ್ಯ*



*ವಿ. ಸೀತಾರಾಮಯ್ಯ*



*ಜಿ.ಪಿ. ರಾಜರತ್ನಂ*



*ಕೆ.ಎಸ್. ನರಸಿಂಹಸ್ವಾಮಿ*

ಪ್ರವೃತ್ತಿಯಾಗಿ ಕಾರ್ಟೂನ್ ರಚಿಸುತ್ತಿದ್ದರು. 'ಆರಂಭದ ದಿನಗಳಲ್ಲಿ ನನ್ನ ಪ್ರತಿಭೆಗೆ 'ತರಂಗ' ಪತ್ರಿಕೆ ಮಣೆ ಹಾಕಿತು' ಎನ್ನುವ ನಂಜುಂಡ ಸ್ವಾಮಿ ಅವರ ಕಾರ್ಟೂನ್‌ಗಳು ಕೊರೋನಾ ಅವಧಿಯಲ್ಲಿ ಹೆಚ್ಚು ಪ್ರಸಿದ್ಧಿ ಪಡೆದವು. ಸಾಮಾಜಿಕ ಜಾಲತಾಣಗಳಲ್ಲಿ ಅವು ವೈರಲ್ ಆಗುತ್ತಿದ್ದವು. ಕೆಲವೇ ದಿನಗಳಲ್ಲಿ ಅವರು ಕನ್ನಡ ಕಾರ್ಟೂನ್ ಕ್ಷೇತ್ರದ ಕಣ್ಮಣಿಯಾದರು.

'ಕಳೆದ ಏಳು ವರ್ಷಗಳಲ್ಲಿ ನನಗೆ ವ್ಯಂಗ್ಯಚಿತ್ರಗಳನ್ನು ರಚಿಸಲು ಅತ್ಯುತ್ತಮ ಪ್ರೋತ್ಸಾಹ ದೊರೆಯಿತು. ಮೇಗರವಳ್ಳಿ ಸುಬ್ರಹ್ಮಣ್ಯ, ಗುಜ್ಜಾರ್, ವಿಆರ್‌ಸಿ ಶೇಖರ್, ಜೇಮ್ಸ್‌ವಾಜ್, ಪ್ರಕಾಶ್ ಶೆಟ್ಟಿ ಸೇರಿದಂತೆ ಹಲವು ಹಿರಿಯ ಕಿರಿಯ ವ್ಯಂಗ್ಯಚಿತ್ರಕಾರರು ಗುರುತಿಸಿ ಬೆಂಬಲ ನೀಡಿದರು' ಎನ್ನುವ ನಂಜುಂಡ ಸ್ವಾಮಿ, ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ಯಾರಿಕೇಚರ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

'ಕನ್ನಡ ಭಾಷೆಯ ಸೊಗಡೇ ಬೇರೆ. ಇತ್ತೀಚಿನ ದಿನಗಳಲ್ಲಿ ನನ್ನ ವ್ಯಂಗ್ಯಚಿತ್ರಗಳನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡುವುದನ್ನು ನಿಲ್ಲಿಸಿದ್ದೇನೆ. ಕನ್ನಡದಲ್ಲಿದ್ದಷ್ಟು 'ಪಂಚ್' ಇಂಗ್ಲಿಷ್‌ನಲ್ಲಿ ಇಲ್ಲ ಎಂಬುದೇ ನನ್ನ ಭಾವನೆ. ನಾನೀಗ ಬಿಡಿಸಿರುವ ವ್ಯಂಗ್ಯ ಭಾವಚಿತ್ರಗಳಲ್ಲಿ ಎಲ್ಲಾ ಸಾಹಿತಿಗಳನ್ನು ಒಂದೇ ಸೂರಿನಡಿ ತರಲು ಸಾಧ್ಯವಾಗದೆ ಇರಬಹುದು. ಆದರೆ ನೂರಕ್ಕೂ ಹೆಚ್ಚಿನ ಹಳೆ-ಹೊಸ ತಲೆಮಾರಿನ ಸಾಹಿತಿಗಳನ್ನು ಚಿತ್ರಿಸಿದ್ದೇನೆಂಬ ಸಮಾಧಾನವಿದೆ' ಎನ್ನುತ್ತಾರೆ.

'ವ್ಯಂಗ್ಯಚಿತ್ರಗಳ ಜೀವಿತಾವಧಿ ಅತ್ಯಲ್ಪ ಅದು ಆಯಾ ಸಂದರ್ಭಗಳಿಗೆ, ದಿನವಿಶೇಷ, ಘಟನೆಗಳಿಗೆ ಸೀಮಿತವಾಗಿರುತ್ತದೆ. ಆದರೆ ವ್ಯಂಗ್ಯಭಾವಚಿತ್ರಗಳು ಶಾಶ್ವತವಾದವು. ಅವುಗಳನ್ನು ರಚಿಸಲು ಹೋಮ್‌ವರ್ಕ್ ಕೂಡ ಬೇಕಾಗುತ್ತದೆ. ಮೊದಲು ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕಾಗಿ ಆ ಸಾಹಿತಿಯ ಕೃತಿಗಳನ್ನು ಓದಿಕೊಳ್ಳಬೇಕು, ಅವರ ಅಭಿರುಚಿಗಳನ್ನು ತಿಳಿದುಕೊಳ್ಳಬೇಕು. ಇದಕ್ಕೆ ಹೆಚ್ಚಿನ ಸಮಯ ಬೇಕಾಗುತ್ತದೆ. ಇದೊಂದು ರೀತಿಯಲ್ಲಿ ಲಲಿತಕಲೆ ಹಾಗೂ ವ್ಯಂಗ್ಯಚಿತ್ರಗಳ ಫ್ಯೂಶನ್ ಎಂದರೂ ತಪ್ಪಿಲ್ಲ' ಎಂಬುದು ಅವರ ಅನುಭವದ ಮಾತು.

ಹಿಂದಿನ ಬಾರಿ ಭಾರತದ 75ಕ್ಕೂ ಹೆಚ್ಚು ಘಟಾನುಘಟಿ ಕರ್ನಾಟಕಿ-ಹಿಂದುಸ್ತಾನಿ ಸಂಗೀತ ಕಲಾವಿದರ, ವಾದ್ಯ ಪರಿಣತರ ಕ್ಯಾರಿಕೇಚರ್‌ಗಳನ್ನು ರಚಿಸುವ ಮೂಲಕ ನೂತನ ದಾಖಲೆ ಬರೆದಿದ್ದರು. ಸ್ವತಃ ಕಲಾವಿದರೇ ಕಣ್ಮುಂದೆ ಕುಳಿತು ಹಾಡುತ್ತಿರುವವರೇನೋ, ವಾದ್ಯ ನುಡಿಸುತ್ತಿರುವವರೇನೋ ಎಂಬಷ್ಟು ತಾದಾತ್ಮ್ಯತೆ ಆ ಚಿತ್ರಗಳಲ್ಲಿತ್ತು.

ಮುಂದಿನ ದಿನಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಅವಗಣನೆಗೆ ಒಳಗಾದ ಹಾಸ್ಯ ಕಲಾವಿದರ ಕ್ಯಾರಿಕೇಚರ್‌ಗಳನ್ನು ತಯಾರಿಸಿ ಪ್ರದರ್ಶಿಸುವ ಬಯಕೆ ಅವರಿಗಿದೆ. ನರಸಿಂಹರಾಜು, ಬಾಲಕೃಷ್ಣ ಮುಸುರಿ ಕೃಷ್ಣಮೂರ್ತಿ ಮೊದಲಾದ, ಇಂದಿನ ಜನಾಂಗ ಮರೆತೇ ಹೋಗಿರುವ, ಕನ್ನಡದ ಹಾಸ್ಯ ಕಲಾವಿದರ ಕ್ಯಾರಿಕೇಚರ್‌ಗಳ ತಯಾರಿಕೆಯಲ್ಲಿ ಅವರೀಗ ತೊಡಗಿಕೊಂಡಿದ್ದಾರೆ.

ನಂಜುಂಡಸ್ವಾಮಿ ಅವರ ಕ್ಯಾರಿಕೇಚರ್ ಕ್ರಾಂತಿ ಸರಣಿ ಹೀಗೇ ಮುಂದುವರಿಯಲಿ. ಕನ್ನಡ ಮನಸ್ಸುಗಳು ಕರ್ನಾಟಕದ ಮೇಲಿನ ಆದರಾಭಿಮಾನವನ್ನು ಬೆಳೆಸಿಕೊಳ್ಳುವುದಕ್ಕೆ ಸಹಕಾರಿಯಾಗಿರುವ ನಂಜುಂಡಸ್ವಾಮಿಯವರ ಪ್ರಯತ್ನಕ್ಕೆ ಭೇಷ್ ಎನ್ನೋಣ. ಅಂದ ಹಾಗೆ, ನವೆಂಬರ್ ಒಂದರಿಂದ 'ಕುಂಚ ಕಂಡ ಕನ್ನಡ ಸಾಹಿತಿಗಳು' ಕ್ಯಾರಿಕೇಚರ್ ಪ್ರದರ್ಶನ ನಡೆಯಲಿರುವ ಬೆಂಗಳೂರಿನ ಬಸವನಗುಡಿಯ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್'ಗೆ ಭೇಟಿ ನೀಡುವುದನ್ನು ಮರೆಯಬೇಡಿ! ■

# ಕುಂಚದಲ್ಲಿ ಅರಳಿದ ಸಾಹಿತಿ ಚಿತ್ತಾರ

**ವಿದ್ಯಾರಶ್ಮಿ ಪೆಲತ್ತಡ್ಕ**
vidyarashmi.bhat@timesgroup.com









ರಾಜ್ಯೋತ್ಸವ ಅನ್ನುವಾಗ ಕನ್ನಡ ಸಾಹಿತಿಗಳೇ ಮೊದಲು ನೆನಪಾಗುತ್ತಾರೆ. ಕನ್ನಡ ರಾಜ್ಯೋತ್ಸವವನ್ನು ಸಾಹಿತಿಗಳ ಭಾವ ವ್ಯಂಗ್ಯಚಿತ್ರಗಳ ಮೂಲಕವೇ ಆಚರಿಸುತ್ತಿದ್ದಾರೆ ವ್ಯಂಗ್ಯಚಿತ್ರಕಾರ ನಂಜುಂಡ ಸ್ವಾಮಿಯವರು. ಇಂದಿನಿಂದ ಬೆಂಗಳೂರಿನಲ್ಲಿ ಆರಂಭವಾಗುತ್ತಿರುವ 'ಕುಂಚ ಕಂಡ ಕನ್ನಡ ಸಾಹಿತಿಗಳು' 90ಕ್ಕೂ ಹೆಚ್ಚು ಕನ್ನಡ ಸಾಹಿತಿಗಳ ವಿಶಿಷ್ಟ ಕ್ಯಾರಿಕೇಚರ್ ಪ್ರದರ್ಶನದ ಬಗೆಗೆ ಕಲಾವಿದ ನಂಜುಂಡಸ್ವಾಮಿಯವರು ಇಲ್ಲಿ ಮಾತನಾಡಿದ್ದಾರೆ.

**ಸಾಹಿತಿಗಳ ಚಿತ್ರವನ್ನೇ ಬರೆಯಬೇಕು ಎಂದು ಯಾಕನಿಸ್ತು?**

ಲವಲVK INTERVIEW



ನಾನು ಈ ಹಿಂದೆ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು ಮತ್ತು ಹಿಂದೂಸ್ತಾನಿ ಗಾಯಕರ ಸುಮಾರು 95 ಕ್ಯಾರಿಕೇಚರ್‌ಗಳನ್ನು ರಚಿಸಿ ಪ್ರದರ್ಶನ ಮಾಡಿದ್ದೆ. ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ಕನ್ನಡ ಸಾಹಿತಿಗಳ ಚಿತ್ರಗಳೊಂದಿಗೆ ಆಚರಿಸೋಣ ಅನಿಸಿತು. ನಮ್ಮಲ್ಲಿ ಇಂದಿನವರಿಗೆ ಹಳೆಯ ಸಾಹಿತಿಗಳು, ಸಾಹಿತ್ಯದ ಬಗೆಗೆ ಒಂದು ರೀತಿಯ ಮರವೆಯಾಗಿದೆ. ಇಲ್ಲಿನ ಕ್ಯಾರಿಕೇಚರ್‌ಗಳ ಮೂಲಕ ಎಲ್ಲರೂ ಅವರನ್ನು ನೆನಪಿಸಿಕೊಂಡು ಮತ್ತೆ ಅವರ ಸಾಹಿತ್ಯ ಓದುವಂತಾದರೆ ನನ್ನ ಕೆಲಸ ಸಾರ್ಥಕ. ಇಲಿ ಸಾಹಿತಿಗಳ ಜೊತೆಗೆ ಏಳೆಂಟು ಪ್ರಕಾಶಕರ ಕ್ಯಾರಿಕೇಚರ್‌ಗಳೂ ಇವೆ.

**ಇಷ್ಟು ಕ್ಯಾರಿಕೇಚರ್ ಮಾಡಲು ಎಷ್ಟು ಸಮಯ ತಗುಲಿತು?**

ಸುಮಾರು ಎರಡು-ಎರಡೂವರೆ ತಿಂಗಳು ಬೇಕಾಯಿತು. ಇದರಲ್ಲಿ ಡಿಟೇಲಿಂಗ್ ಇದೆ, ಕಲರಿಂಗೂ ಇದೆ. ಈ ಕ್ಯಾರಿಕೇಚರ್‌ಗಳನ್ನು ಕಾರ್ಟೂನ್ ಮತ್ತು ಫೈನ್ ಆರ್ಟ್ ಫ್ಯೂಷನ್ ಎನ್ನಬಹುದು. ಆ ಬಗೆಯ ಎಫೆಕ್ಟ್ ಇವುಗಳಲ್ಲಿ ಇದೆ.

**ವ್ಯಂಗ್ಯಭಾವಚಿತ್ರ ಮಾಡುವಾಗ ಯಾವ ಅಂಶವನ್ನು ಗಮನದಲ್ಲಿರಿಸಿಕೊಳ್ಳಬೇಕು?**

ಒಂದು ಕ್ಯಾರಿಕೇಚರ್ ಅಂದರೆ ವ್ಯಕ್ತಿಯ ಮುಖದ ಭಾವವನ್ನು ಉತ್ಪ್ರೇಕ್ಷೆ ಮಾಡೋದು. ಒಂದು ನಗುವೋ ಸಿಟ್ಟೋ ಆಶ್ಚರ್ಯವೋ ಇರುತ್ತದಲ್ಲ, ಅದನ್ನು ಉತ್ಪ್ರೇಕ್ಷೆ ಮಾಡುವ ಜೊತೆಗೆ ಅವರನ್ನು ಸೂಚಿಸುವ ಪ್ರಮುಖ ವಸ್ತು-, ಪೆನ್ನೋ, ಪುಸ್ತಕವನ್ನೋ ಜೊತೆಗೂಡಿಸಿ ರಚಿಸುವುದು. ಹೀಗೆ ರಚಿಸುವಾಗ ಅದರಲ್ಲಿನ ಭಾವ ಹಾಳಾಗಬಾರದು. ಅದನ್ನು ಕಾಪಾಡುವುದು ಸವಾಲೇ. ನನ್ನ ಕ್ಯಾರಿಕೇಚರ್‌ನಲ್ಲಿ ಆ ಜೀವಂತಿಕೆಯನ್ನು ಕ್ಯಾರಿ ಮಾಡ್ತೀನಿ ಅಂತ ಹಲವು ಕಲಾವಿದರು, ಸಾಹಿತಿಗಳು ಹೇಳಿದ್ದಾರೆ.

**ಎಷ್ಟು ವ್ಯಂಗ್ಯಭಾವಚಿತ್ರ ಪ್ರದರ್ಶನಗಳನ್ನು ಮಾಡಿದ್ದೀರಿ?**

ಇದು ಮೂರನೆಯ ಸೋಲೋ ಪ್ರದರ್ಶನ. ಇವಲ್ಲದೆ ಸಮೂಹ ಪ್ರದರ್ಶನಗಳಲ್ಲಿ ಸಾಕಷ್ಟು ಭಾಗವಹಿಸಿದ್ದೇನೆ. ಹಲವಾರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಗುರುತಿಸಲ್ಪಟ್ಟಿದ್ದೇನೆ. ನಾನು ಚಿತ್ರಕಲಾವಿದನೇ, ಕಳೆದ ಆರೇಳು ವರ್ಷಗಳಿಂದ ಕಾರ್ಟೂನ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ.

**ಕನ್ನಡದಲ್ಲಿ ವ್ಯಂಗ್ಯಚಿತ್ರಕಾರರು ಸಾಕಷ್ಟು ಜನ ಇದ್ದಾರಾ? ಅವರಿಗೆ ಅವಕಾಶ?**

ಇಲ್ಲಿ ಕಲಾವಿದರ, ವ್ಯಂಗ್ಯಚಿತ್ರಕಾರರ ಸಂಖ್ಯೆ ಕಡಿಮೆ ಏನಲ್ಲ. ಆದರೆ, ಅವರ ಜೀವನಕ್ಕೆ ಹೋರಾಟವಿದೆ. ಹಿಂದೆಲ್ಲ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಕಾರರಿಗೆ ಆದ್ಯತೆ ಇರುತ್ತಿತ್ತು, ಅವರ ಕಾರ್ಟೂನ್‌ಗಳಿಗೂ ಒಳ್ಳೆಯ ಸ್ಥಾನ ಸಿಗುತ್ತಿತ್ತು. ಇಂದು ಹಾಗಿಲ್ಲ. ವ್ಯಂಗ್ಯಚಿತ್ರಕಾರರ ಮೇಲೆ, ಪತ್ರಿಕೆಗಳ ಮೇಲೆ ರಾಜಕೀಯ ಒತ್ತಡವೂ ಇರುತ್ತದೆ.

**ಮುಂದಿನ ಯೋಜನೆ?**

ಸಂಗೀತಗಾರರ ಕ್ಯಾರಿಕೇಚರ್‌ಗಳನ್ನು ಪುಸ್ತಕ ಮಾಡುವ ಕೆಲಸ ನಡೆಯುತ್ತಿದೆ. ಈ ಸಾಹಿತಿಗಳ ಚಿತ್ರಗಳನ್ನೂ ಪುಸ್ತಕ ಮಾಡುವ ಅಭಿಲಾಷೆ ಇದೆ. ಈ ರೀತಿ ಒಂದೇ ವೇದಿಕೆಯಲ್ಲಿ ಇಷ್ಟೊಂದು ಸಾಹಿತಿಗಳ ಕ್ಯಾರಿಕೇಚರ್ ಪ್ರದರ್ಶನವಾದ ಉದಾಹರಣೆ ಇಲ್ಲ. ■

**ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಕಾರ್ಟೂನ್ ಗ್ಯಾಲರಿಯಲ್ಲಿ ಇಂದು ಸಂಜೆ 4ಗಂಟೆಗೆ ಉದ್ಘಾಟನೆಗೊಳ್ಳಲಿರುವ ಈ ಕ್ಯಾರಿಕೇಚರ್ ಪ್ರದರ್ಶನ ನವೆಂಬರ್ 15ರವರೆಗೂ ಮುಂದುವರಿಯಲಿದೆ.**